**ಪ್ರ ದ ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಶಾಲನಗರ**

**ಸಿ ಸಿ ನಂಃ 741/2020**

ಸಾಕ್ಷಿಯ ಹೆಸರುಃ ಸತೀಶ ಫ್ರಾಸಾ ಃ 3
ತಂದೆ /ಗಂಡನ ಹೆಸರು ಃ ಅಣ್ಣಯ್ಯ ಚಾಸಾ ಃ 5
ವಯಸ್ಸು ಃ 49
ಉದ್ಯೋಗ ಃ ಕೂಲಿ ಕೆಲಸ
ವಾಸ ಸ್ಥಳ ಃ ಹೆಬ್ಬಾಲೆ ಗ್ರಾಮ, ಕುಶಾಲನಗರ.

ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ **16.03.2023**

ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದ

ನನಗೆ ಚಾಸಾ-1 ರಿಂದ 4 ಮತ್ತು 6 ರವರ ಪರಿಚಯ ಇದೆ. ನನಗೆ ನ್ಯಾಯಾಲಯದ ಮುಂದೆ ಇರುವ ಆರೋಪಿಯ ಪರಿಚಯ ಇದೆ.

ದಿಃ 24.07.2020 ರಂದು ಬೆಳಗ್ಗೆ 11.30 ಗಂಟೆಗೆ ಫ್ರಾಸಾ-1 ಹಾಗೂ ಅವರ ಅಣ್ಣನವರ ಮಗ ಚಾಸಾ-4 ರವರು ಪಂಚಾಯ್ತಿಯ ಆಫೀಸ್ ಕಡೆಗೆ ನಡೆದು ಕೊಂಡು ಹೋಗುತ್ತಿದ್ದಾಗ, ಅದೇ ಸಮಯಕ್ಕೆ ಚಾಸಾ-6 ರವರ ಅಂಗಡಿಯ ಮುಂದೆ ಆರೋಪಿ ಫ್ರಾಸಾ-1 ರವರನ್ನು ತಡೆದು ಅವ್ಯಾಚ್ಯ ಶಬ್ದಗಳಿಂದ ಬೈದು , ಒಂದು ಬೊಡ್ರಸ್ ಕಲ್ಲನ್ನು ತೆಗೆದು ಫ್ರಾಸಾ-1 ರವರ ಎಡ ಭಾಗದ ಭುಜಕ್ಕೆ ಗುದ್ದಿ , ಅವರನ್ನು ನೆಲಕ್ಕೆ ಬೀಳಿಸಿರುತ್ತಾರೆ ನಂತರ ಕಾಲಿನಿಂದ ಫ್ರಾಸಾ-1 ರವರ ಬಲ ಗಾಲನ್ನು ತುಳಿದು ನೋವುಂಟು ಮಾಡಿರುತ್ತಾರೆ. ನಂತರ ಕಲ್ಲನ್ನು ಅಲ್ಲೆ ಬೀಸಾಡಿ ಫ್ರಾಸಾ-1 ರವರಿಗೆ ಕೊಲೆ ಬೆದರಿಕೆ ಹಾಕಿ ಅಲ್ಲಿಂದ ಹೊರಟು ಹೋಗಿರುತ್ತಾರೆ. ನಂತರ ನಾನು ಫ್ರಾಸಾ-2 ಮತ್ತು ಚಾಸಾ-4 ರವರು ಫ್ರಾಸಾ-1 ರವರನ್ನು ಉಪಚರಿಸಿ, ಅವರನ್ನು ಯಾವುದೊ ಒಂದು ಕಾರಿನಲ್ಲಿ ಚಿಕಿತ್ಸೆಗಾಗಿ ಕುಶಾಲನಗರದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿರುತ್ತೇವೆ. ನಂತರ ಫ್ರಾಸಾ-1 ರವರು ಆರೋಪಿಯ ವಿರುದ್ಧ ದೂರು ದಾಖಲಿಸಿರುವ ವಿಚಾರ ತಿಳಿದು ಬಂದಿರುತ್ತದೆ.

**ಪಾಟೀ ಸವಾಲಿಗೆ ಆರೋಪಿ ಕಾಲಾವಕಾಶ ಕೋರಿರುತ್ತಾರೆ ನೀಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾ ದಂ, ಕುಶಾಲನಗರ.